# ಆಚಾರ ಸಂಹಿತೆ

ಐಟಿಜೆಡ್ ಕ್ಯಾಶ್ ಕಾರ್ಡ ಲಿಮಿಟೆಡ್ ("ಐಸಿಸಿಎಲ್") ತನ್ನ ವಹಿವಾಟನ್ನು ಅನ್ವಯವಾಗುವ ಕಾಯಿದೆಗಳು, ನಿಯಮಗಳು ಮತ್ತು ವಿನಿಯಮನಗಳನುಸಾರ ನಡೆಸಲು ಮತ್ತು ವ್ಯಾಪಾರನೀತಿ ಮತ್ತು ನೈತಿಕ ಆಚರಣೆಯಲ್ಲಿ ಅತ್ಯುನ್ನತ ಮಾನದಂಡಗಳನ್ನು ಸ್ಥಾಪಿಸಲು ಬದ್ಧವಾಗಿರುತ್ತದೆ.

ಆದ್ದರಿಂದ ವರ್ತನೆ ಮತ್ತು ಯುಕ್ತಕಾರ್ಯಗಳಿಗೆ ಸಂಬಂಧಿಸಿದಂತೆ ಒಂದು ಮಾರ್ಗದರ್ಶಿ ಸೂಚನೆಗಳ ರೀತಿಯಲ್ಲಿ ಈ ಸಂಹಿತೆಯನ್ನು ಒದಗಿಸುವುದು ಯಥೋಚಿತವೆಂದು ಐಸಿಸಿಎಲ್ ಭಾವಿಸುತ್ತದೆ. ಇದರಿಂದ ಕಂಪೆನಿ ಮತ್ತು ಅದರ ಷೇರುದಾರರು ನಿರೀಕ್ಷಿಸುವಂತೆ ಎಲ್ಲ ನಿರ್ದೇಶಕರು ಮತ್ತು ನೌಕರರು ತಾವು ಅನುಪಾಲಿಸಬೇಕಾದ ಮಾನದಂಡಗಳ ಬಗ್ಗೆ ತಿಳಿಯಲು ಸಾಧ್ಯವಾಗುತ್ತದೆ.

ಈ ಸಂಹಿತೆಯ ಮೇರೆಗೆ ಕಂಪೆನಿಯ ಎಲ್ಲ ನಿರ್ದೇಶಕರು ಮತ್ತು ನೌಕರರೂ ಕಂಪೆನಿಯ ಮತ್ತು ಷೇರುದಾರರ ಗರಿಷ್ಠ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ತಮಗೆ ಸತ್ತವಾದ ಅಧಿಕಾರ ವ್ಯಾಪ್ತಿಯೊಳಗೆ ವಿಚಾರವರಿತು ತೀರ್ಮಾನ ತೆಗೆದುಕೊಳ್ಳಲು ಮತ್ತು ನೀತಿಗಳನ್ನು ಕಾರ್ಯರೂಪಕ್ಕೆ ತರಲು ಕರ್ತವ್ಯಬದ್ಧರಾಗಿರುತ್ತಾರೆ.

ಈ ಬದ್ಧತೆಯನ್ನು ಬೆಂಬಲಿಸುವ ರೀತಿಯಲ್ಲಿ ಈ ಸಂಹಿತೆಯು ವಹಿವಾಟು ರೀತಿನೀತಿ ಮತ್ತು ತತ್ವಗಳನ್ನು ಪ್ರತಿಫಲಿಸುತ್ತದೆ. ಕಂಪೆನಿಯ ನಿರ್ದೇಶಕರುಗಳ ಮಂಡಳಿಯು ("ಮಂಡಳಿ") ಈ ಸಂಹಿತೆಯಲ್ಲಿ ಹೇಳಿರುವ ವರ್ತನಾ ಮಾನದಂಡಗಳನ್ನು ರೂಪಿಸಲು ಮತ್ತು ಕಾಯಿದೆಯ ಮತ್ತು ವಿನಿಯಂತ್ರಕ ಬೆಳವಣಿಗೆಗಳಿಗನುಸಾರವಾಗಿ ಇವುಗಳನ್ನು ಇಂದೀಕರಿಸಲು ಹೊಣೆಗಾರನಾಗಿರುತ್ತದೆ. ಈ ಸಂಹಿತೆಯು ಮಾರ್ಗದರ್ಶನ ನೀಡಲು ಮತ್ತು ನೈತಿಕ ಪ್ರಶ್ನೆಗಳನ್ನು ಗುರುತಿಸಿ ಅದನ್ನು ಪರಿಹರಿಸುವುದರಲ್ಲಿ ನೆರವು ನೀಡಿ ಪ್ರಾಮಾಣಿಕತೆಯ ಮತ್ತು ಉತ್ತರದಾಯಿತ್ವದ ಸಂಸ್ಕೃತಿಯನ್ನು ಬೆಳೆಸುವ ಉದ್ದೇಶ ಹೊಂದಿರುತ್ತದೆ. ಪ್ರತಿಯೋರ್ವ ನಿರ್ದೇಶಕನೂ ಮತ್ತು ನೌಕರನೂ ಈ ಸಂಹಿತೆಯನ್ನು ಓದುತ್ತಾನೆಂದು ಮತ್ತು ಇದು ತನ್ನ ಕರ್ತವ್ಯಗಳು, ಪರಿಕರ್ಮಗಳು ಮತ್ತು ಜವಾಬ್ದಾರಿಗಳ ಕಾರ್ಯನಿರ್ವಹಣೆಗೆ ಎಷ್ಟರಮಟ್ಟಿಗೆ ಅನ್ವಯಿಸುತ್ತದೆಂಬುದನ್ನು ಅರ್ಥಮಾಡಿಕೊಳ್ಳುತ್ತಾನೆಂದೂ ನಿರೀಕ್ಷಿಸಲಾಗಿದೆ.

ಎಲ್ಲ ನಿರ್ದೇಶಕರೂ ಮತ್ತು ನೌಕರರೂ ಈ ಸಂಹಿತೆಯನ್ನು ಚೆನ್ನಾಗಿ ತಿಳಿದುಕೊಳ್ಳುವುದಲ್ಲದೆ ಇದನ್ನು ಪಾಲಿಸಬೇಕು. ಈ ಸಂಹಿತೆಗೆ ಅನುಸಾರವಾಗಿ ನಡೆದುಕೊಳ್ಳದಿದ್ದಲ್ಲಿ ಉಲಂಘನೆ ಮಾಡಿದ ವ್ಯಕ್ತಿಗಳೂ ಮತ್ತು ಅದನ್ನು ನೋಡಿಯೂ ಸುಮ್ಮನಿರುವ ವ್ಯಕ್ತಿಗಳೂ ಯಥೋಚಿತ ಶಿಸ್ತು ಕ್ರಮಕ್ಕೆ ಗುರಿಯಾಗುತ್ತಾರೆ. ಈ ಸಂಹಿತೆಯಲ್ಲಿನ ಮಾನದಂಡಗಳು ಸಾಮಾನ್ಯ ಸ್ವರೂಪದ್ದು. ನಿರ್ದೇಶಕರು ಮತ್ತು ನೌಕರರು ಎದುರಿಸಬಹುದಾದ ಪ್ರತಿಯೊಂದು

ಸನ್ನಿವೇಶವನ್ನೂ ಕುರಿತು ಹೇಳುವುದಿಲ್ಲ. ಯಥೋಚಿತ ಪ್ರಕರಣಗಳಲ್ಲಿ ನಿರ್ದಿಷ್ಟ ಸನ್ನಿವೇಶಗಳಿಗೆ ಈ ಸಂಹಿತೆಯನ್ನು ಅನ್ವಯಿಸುವುದಕ್ಕೆ ಸಂಬಂಧಪಟ್ಟಂತೆ ಮಂಡಳಿಯಿಂದ ಮಾರ್ಗದರ್ಶನವನ್ನು ಪಡೆಯಬೇಕು.

ಕಂಪೆನಿಯು ಈ ಸಂಹಿತೆಯ ಉದ್ದೇಶಗಳಿಗಾಗಿ ಕಂಪೆನಿ ಕಾರ್ಯದರ್ಶಿಯನ್ನು ಅನುಪಾಲನಾ ಅಧಿಕಾರಿಯೆಂದು ನೇಮಕ ಮಾಡುತ್ತದೆ. ಇವರು ನಿರ್ದೇಶಕರುಗಳ/ನೌಕರರುಗಳ ಪ್ರಶ್ನೆಗಳಿಗೆ ಉತ್ತರಿಸಲೂ ಮತ್ತು ಈ ಸಂಹಿತೆಯ ಪಾಲನೆಯಲ್ಲಿ ನೆರವೀಯಲು ಲಭ್ಯವಿರುತ್ತಾರೆ. ಅನುಪಾಲನಾ ಅಧಿಕಾರಿಯು ಸ್ವೀಕರಿಸಿದ ದೂರುಗಳನ್ನು ಲೆಕ್ಕ ಪರಿಶೋಧನಾ ಸಮಿತಿಯ ಅಧ್ಯಕ್ಷರಿಗೆ ಕಳಿಸಿಕೊಡಲಾಗುತ್ತದೆ.

**ಸಂಹಿತೆಯ ಅನ್ವಯದವ್ಯಾಪ್ತಿ**

ಎ. ಈ ಆಚಾರ ಸಂಹಿತೆಯು ಕಂಪೆನಿಯ ಎಲ್ಲ ನಿರ್ದೇಶಕರುಗಳ ಮಂಡಳಿಯ ಸದಸ್ಯರಿಗೂ ಮತ್ತು ನೌಕರರಿಗೂ ಅನ್ವಯಿಸುತ್ತದೆ.

ಬಿ. ಈ ಸಂಹಿತೆಯಲ್ಲಿ ಒಳಗೊಂಡಿರುವ ತತ್ವಗಳು ಸಾಮಾನ್ಯ ಸ್ವರೂಪದ್ದಾಗಿದ್ದು ಹೆಚ್ಚಿನ ನಿರ್ದಿಷ್ಟ ಸೂಚನೆಗಳಿಗಾಗಿ ನಿರ್ದೇಶಕರುಗಳು ಮತ್ತು ನೌಕರರುಅನ್ವಯವಾಗುವ ಕಂಪೆನಿಯ ಇತರ ನೀತಿಗಳು ಮತ್ತು ಕಾರ್ಯವಿಧಾನಗಳನ್ನು ಪುನರೀಕ್ಷಣೆ ಮಾಡಬೇಕೆಂದು ಕೋರಲಾಗಿದೆ. ಈ ಬಗ್ಗೆ ಯಾವುದೇ ಸ್ಪಷ್ಟೀಕರಣ ಬೇಕಾಗಿದ್ದಲ್ಲಿ ಅನುಪಾಲನಾಧಿಕಾರಿಯನ್ನು ಸಂಪರ್ಕಿಸಬಹುದಾಗಿದೆ.

ಸಿ. ಕಂಪೆನಿಯು ಪಟ್ಟಿ ಮಾಡಲ್ಪಟ್ಟ ಕಂಪೆನಿ ಆಗಿರದ ಕಾರಣ ಕೆಲವು ಉಪಬಂಧಗಳು ವಿಧಿಪದ್ದವಲ್ಲ ಈ ಉಪಬಂಧಗಳು ಪ್ರಸಕ್ತ ಪರಿಸರದಲ್ಲಿ ಪ್ರಗತಿಯ ನೋಟವನ್ನು ಹೊಂದಿರುತ್ತದೆ.

ಡಿ. ಅರ್ಥ ವಿವರಣೆ:

ಈ ನೀತಿಯಲ್ಲಿ ತದ್ವಿರುದ್ಧದ ಉದ್ದೇಶವು ಕಾಣ ಬಂದ ಹೊರತು:

- ಏಕವಚನವು ಬಹುವಚನವನ್ನೂ ಬಹುವಚನವು ಏಕವಚನವನ್ನೂಒಳಗೊಂಡಿರುತ್ತದೆ.
- ಯಾವುದೇ ಪದ ಅಥವಾ ವಾಕ್ಯಭಾಗವು ಪುಲ್ಲಿಂಗ, ಸ್ತ್ರೀಲಿಂಗ ಅಥವಾ ನಪುಂಸಕಲಿಂಗವನ್ನು ಹೇಳುತ್ತಿದ್ದರೆ ಅದು ಮೂರೂ ಲಿಂಗಗಳನ್ನೂ ಒಳಗೊಂಡಿರುತ್ತದೆ ಎಂದು ತಿಳಿಯತಕ್ಕದ್ದು.

೧. ಸಾಮಾನ್ಯ ಆಚಾರ ಸಂಹಿತೆ:

ಎ. ಐಸಿಸಿಐಎಲ್ ತಾನು ಕಾರ್ಯಾಚರಣೆ ನಡೆಸುವ ದೇಶದ ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡಲು ಬದ್ಧವಾಗಿರುತ್ತದೆ. ಐಸಿಸಿಐಎಲ್ ತಾನು ಕಾರ್ಯಾಚರಣೆ ನಡೆಸುವ ಸಮುದಾಯಗಳ ವ್ಯಾಪಕ ಹಿತಾಸಕ್ತಿಗಳಿಗೆ ಧಕ್ಕೆಯುಂಟು ಮಾಡುವಂತಹ ಯಾವುದೇ ಯೋಜನೆಯನ್ನಾಗಲಿ ಅಥವಾ ಕ್ರಿಯೆಯನ್ನಾಗಲಿ ಕೈಗೊಳ್ಳುವುದಿಲ್ಲ. ಐಸಿಸಿಐಎಲ್ ನ ನಿರ್ವಹಣಾ ಪದ್ಧತಿಗಳು ಮತ್ತು ವಹಿವಾಟು ನಡೆಸುವಿಕೆಯು ಸಾಧ್ಯವಾದಷ್ಟು ಮತ್ತು ಶಕ್ತಿಯಿರುವಷ್ಟರ ಮಟ್ಟಿಗೆ ದೇಶಕ್ಕೆ ಪ್ರದೇಶಗಳಿಗೆ ಮತ್ತು ಸಮುದಾಯಗಳಿಗೆ ಪ್ರಯೋಜನ ಸಿಗುವಂತಿರಬೇಕು ಹಾಗು ತತ್ ದೇಶದಲ್ಲಿನ ಸರ್ಕಾರದ ಕಾಯಿದೆಗಳು ಮತ್ತು ಆರ್ಥಿಕ ಅಭಿವೃದ್ಧಿಯ ನೀತಿಗಳಿಗೆ ಅನುಸಾರವಾಗಿರತಕ್ಕದ್ದು.

ಬಿ. ಐಸಿಸಿಐಎಲ್ ಕಂಪೆನಿಯು ತಾನು ವಹಿವಾಟು ವ್ಯವಹಾರ ನಡೆಸುವ ದೇಶದಲ್ಲಿ ಸಾಮಾನ್ಯವಾಗಿ ಅಂಗೀಕೃತವಾದ ಅಲ್ಲಿಯ ಮಾರ್ಗದರ್ಶಿ ಸೂಚನೆಗಳು,ತತ್ವಗಳು,ಮಾನದಂಡಗಳು,ಕಾಯಿದೆಗಳು ಮತ್ತು ವಿನಿಯಮನಗಳನ್ನು ಪ್ರತಿನಿಧಿಸುವ ಲೆಕ್ಕ ವ್ಯವಸ್ಥೆ ಮತ್ತು ವಿತ್ತೀಯ ವರದಿಯ ಮಾನದಂಡಗಳಿಗೆ ಅನುಸಾರವಾಗಿ ನಿಜ ಮತ್ತು ನ್ಯಾಯವಾದ ರೀತಿಯಲ್ಲಿ ಲೆಕ್ಕಗಳನ್ನು ಸಿದ್ಧಪಡಿಸಿ ನಿರ್ವಹಿಸತಕ್ಕದ್ದು. ಆಂತರಿಕ ಲೆಕ್ಕ ವ್ಯವಸ್ಥೆ ಮತ್ತು ಲೆಕ್ಕ ಪರಿಶೋಧನೆಯ ಕಾರ್ಯವಿಧಾನಗಳು ಕಂಪೆನಿಯ ವಹಿವಾಟು ವ್ಯವಹಾರಗಳನ್ನು ಮತ್ತು ಸ್ವತ್ತುಗಳ ಅವಸ್ಥಾ ಸ್ಥಿತಿಯನ್ನು ನಿಜ ಮತ್ತು ನ್ಯಾಯಯುತವಾದ ರೀತಿಯಲ್ಲಿ ಪ್ರತಿಫಲಿಸುವಂತಿರತಕ್ಕದ್ದು. ಅಲ್ಲದೆ ಕಂಪೆನಿಯ ಮಂಡಳಿಗೂ ಮತ್ತು ಷೇರುದಾರರಿಗೂ ನಡೆದಿರುವ ವ್ಯವಹಾರಗಳು ಕಾಯಿದೆ ಬದ್ಧವಾಗಿದೆಯೆಂಬ ಭರವಸೆ ನೀಡುವಂತಹ ಆಂತರಿಕ ನಿಯಂತ್ರಣಗಳನ್ನು ಹೊಂದಿರತಕ್ಕದ್ದು. ಲೆಕ್ಕದ ಪುಸ್ತಕಗಳಲ್ಲಿ ಮತ್ತು ದಾಖಲೆಗಳಲ್ಲಿ ಯಾವ ವ್ಯವಹಾರಗಳೂ ಉದ್ದೇಶಪೂರ್ವಕವಾಗಿ ಕೈಬಿಟ್ಟು ಹೋಗಬಾರದು. ಯಾವುದೇ ಮುಂಗಡ ಆದಾಯದ ಮಾನ್ಯತೆ ಮತ್ತು ಯಾವುದೇ ಗುಪ್ತ ಬ್ಯಾಂಕ್ ಖಾತೆ ಮತ್ತು ನಿಧಿಗಳು ಇರತಕ್ಕದ್ದಲ್ಲ. ವಿತ್ತೀಯ ಲೆಕ್ಕ ಪತ್ರಗಳಲ್ಲಿ ಮತ್ತು ವರದಿಗಳಲ್ಲಿ ಯಾವುದೇ ಉದ್ದೇಶ ಪೂರ್ವಕ ಮಹತ್ವದ ತಪ್ಪು ಮಾಹಿತಿ ಮಂಡನೆ ಮತ್ತು /ಅಥವಾ ತಪ್ಪುಮಾಹಿತಿ ಕೊಡುವುದರ ಬಗ್ಗೆ ಸಂಬಂಧಪಟ್ಟ ಕಾಯಿದೆಗಳ ಮೇರೆಗೆ ಯಥೋಚಿತ ಸಿವಿಲ್ ಅಥವಾ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವುದಲ್ಲದೆ ಸಂಹಿತೆಯ ಉಲ್ಲಂಘನೆಯೆಂದು ಪರಿಗಣಿಸಲಾಗುತ್ತದೆ. ಯಾವುದೇ ನೌಕರನು ಅನುಚಿತ ಸಂದಾಯ, ರುಸುಮು ಅಥವಾ ರುಷುವತ್ತನ್ನು ಕೊಡತಕ್ಕದ್ದಲ್ಲ, ಕೊಡಲು ಅನುಮತಿಸತಕ್ಕದಲ್ಲ ಅಥವಾ ಹಾಗೆ ಮಾಡುವ ಸಂಚಿನಲ್ಲಿ ಭಾಗಿಯಾಗತಕ್ಕದ್ದಲ್ಲ.

ಸಿ. ಐಸಿಸಿಐಎಲ್ ಸ್ಪರ್ಧಾತ್ಮಕ ಮುಕ್ತ ಮಾರುಕಟ್ಟೆಗಳ ಅಭಿವೃದ್ಧಿಯನ್ನು ಮತ್ತು ಆಚರಣೆಯನ್ನು ಬೆಂಬಲಿಸುತ್ತದೆ ವಿಶೇಷತಃ ಐಸಿಸಿಐಎಲ್ ಏಕ ಸಾಮ್ಯಗಳು, ಮಾರುಕಟ್ಟೆ ಆಧಿಪತ್ಯಗಳು, ಕೂಟಗಳು ಇವನ್ನು ಹುಟ್ಟು ಹಾಕುವ ಅಥವಾ ಇವುಗಳ ರಚನೆಗೆ ಬೆಂಬಲ ಕೊಡುವಂತಹ ನಿರ್ಬಂಧಿತ ವ್ಯಾಪಾರ ಪದ್ಧತಿಗಳಲ್ಲಿ ಮತ್ತು ಚಟುವಟಿಕೆಗಳಲ್ಲಿ ತೊಡಗತಕ್ಕದ್ದಲ್ಲ. ಐಸಿಸಿಐಎಲ್ ತನ್ನ ಉತ್ಪನ್ನಗಳು ಮತ್ತು ಸೇವೆಗಳನ್ನು ಅವುಗಳ ಸ್ವಂತ ಗುಣಗಳನ್ನು ಆಧರಿಸಿಯೇ

ವಿಕ್ರಯ ಮಾಡತಕ್ಕದ್ದು. ಇತರ ಸ್ಪರ್ಧಿಗಳ ಉತ್ಪನ್ನಗಳು ಮತ್ತು ಸೇವೆಗಳ ಬಗ್ಗೆ ಸಮ್ಮತವಲ್ಲದ ಮತ್ತು ತಪ್ಪುದಾರಿಗೆಳೆವ ಹೇಳಿಕೆಗಳನ್ನು ನೀಡತಕ್ಕದ್ದಲ್ಲ. ಸ್ಪರ್ಧಾತ್ಮಕ ಮಾರುಕಟ್ಟೆ ಮಾಹಿತಿ ಸಂಗ್ರಹಣೆಯನ್ನು ವಹಿವಾಟಿನ ಸಾಮಾನ್ಯ ಕಾರ್ಯ ನಿರ್ವಹಣೆಯಲ್ಲಿ ಮಾಡತಕ್ಕದ್ದು ಮತ್ತು ಕಾಯಿದೆಯಲ್ಲಿ ಅನುಮತಿಸಿರುವ ಮೂಲಗಳಿಂದಲೇ ಮತ್ತು ಸಾಧನಗಳಿಂದಲೇ ಅದನ್ನು ಮಾಡತಕ್ಕದ್ದು.

ಡಿ. ಐಸಿಸಿಎಲ್ ಸಾರ್ವಜನಿಕರ ಮತ್ತು ತನ್ನ ಪಾಲುದಾರರ ಮಾಹಿತಿ ಅಗತ್ಯತೆಗಳನ್ನು ಪೂರೈಸುತ್ತದೆ. ಕಂಪೆನಿಯ ಮತ್ತು ವಹಿವಾಟಿನ ಮಾಹಿತಿಯನ್ನು ಮಾಧ್ಯಮಗಳೇ ಮುಂತಾದ ಸಾರ್ವಜನಿಕ ಕ್ಷೇತ್ರಗಳು, ವಿತ್ತಸಮುದಾಯ, ನೌಕರರು ಮತ್ತು ಷೇರುದಾರರಿಗೆ ಬಹಿರಂಗಗೊಳಿಸುವುದಕ್ಕೆ ಸಂಬಂಧಿಸಿದಂತೆ ಕಂಪೆನಿಯ ಎಲ್ಲ ಸಾರ್ವಜನಿಕ ಕಾಣಿಸಿಕೊಳ್ಳುವಿಕೆಯಲ್ಲಿ ಐಸಿಸಿಎಲ್‌ನ್ನು ಪ್ರತಿನಿಧಿಸುವವರು ವಿಶೇಷವಾಗಿ ಪ್ರಾಧಿಕೃತರಾದ ನಿರ್ದೇಶಕರು ಮತ್ತು ನೌಕರರು ಆಗಿರತಕ್ಕದ್ದು. ಕಂಪೆನಿಗೆ ಸಂಬಂಧಪಟ್ಟ ಮಾಹಿತಿಯನ್ನು ಪ್ರಕಟಪಡಿಸುವ ಹೊಣೆಗಾರಿಕೆಯು ಈ ಪ್ರಾಧಿಕೃತ ಪ್ರತಿನಿಧಿಗಳದ್ದೇ ಆಗಿರುತ್ತದೆ.

ಇ. ಐಸಿಸಿಎಲ್ ನ ಮಾಲಿಕತ್ವದಲ್ಲಿನ ಹೆಸರು, ಚಿಹ್ನೆ ಮತ್ತು ಸರಕು ಮುದ್ರೆಯ ಬಳಕೆಯು ಕೈಪಿಡಿಗಳು, ಸಂಹಿತೆಗಳು ಮತ್ತು ಒಪ್ಪಂದಗಳಿಗೆ ಒಳಪಟ್ಟಿರುತ್ತದೆ. ಐಸಿಸಿಎಲ್ ನ ನಿರ್ದಿಷ್ಟ ಅಧಿಕಾರ ಪತ್ರವಿಲ್ಲದೆ ಯಾವುದೇ ಮೂರನೇ ಪಕ್ಷಕಾರನು ತನ್ನ ಹಿತಾಸಕ್ತಿಯನ್ನು ಬೆಳೆಸಿಕೊಳ್ಳಲು ಚಿಹ್ನೆಗಳನ್ನು ಮುದ್ರೆಯನ್ನು ಬಳಸಿಕೊಳ್ಳುವಂತಿಲ್ಲ.

**೨. ಕಂಪೆನಿಯ ಆಡಳಿತ ಮಂಡಳಿಯ ನಿರ್ದೇಶಕರುಗಳು / ಸದಸ್ಯರುಗಳು ಪಾಲಿಸಬೇಕಾದ ನಿಯಮ**

ಆಡಳಿತ ಮಂಡಳಿಯ ನಿರ್ದೇಶಕರುಗಳು / ಸದಸ್ಯರುಗಳು ಎಲ್ಲ ಮಂಡಳಿ / ಸಮಿತಿಯ ಸಭೆಗಳಿಗೆ ಹಾಜರಾಗಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಬೇಕು. ಅವರು ಹಾಗೆ ಸಭೆಗೆ ಹಾಜರಾಗಲು ಅಸಮರ್ಥರಾಗಿದ್ದಲ್ಲಿ ಆ ವಿಷಯವನ್ನು ಅಧ್ಯಕ್ಷರಿಗೆ ತಿಳಿಸಬೇಕು. ಯಾವುದೇ ಸದಸ್ಯ ಹಲವಾರು ಆಡಳಿತ ಮಂಡಳಿ ಸಭೆಗಳಿಗೆ ಹಾಜರಾಗುವ ಸಂಭವವಿಲ್ಲವೆಂದು ತನ್ಮೂಲಕ ತನ್ನ ಜವಾಬ್ದಾರಿಗಳನ್ನು ಪೂರೈಸುವ ಸ್ಥಿತಿಯಲ್ಲಿಲ್ಲವೆಂದು ಕಂಡು ಬಂದರೆ ಅಂತಹ ಸದಸ್ಯ ಆಡಳಿತ ಮಂಡಳಿಯ ಸದಸ್ಯರಾಗಿ ತಾನು ಮುಂದುವರೆಯುವ ಕುರಿತಂತೆ ಪರ್ಯಾಲೋಚಿಸಬೇಕು ಅಥವಾ ಪರ್ಯಾಯ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳುವುದನ್ನು ಪರಿಗಣಿಸಬೇಕು. ಸಭೆಗೆ ಬರುವ ಮುನ್ನ ಸದಸ್ಯರು, ಸಭಾ ತಿಳಿವಳಿಕೆ ಪತ್ರದೊಂದಿಗೆ ಕಳುಹಿಸಲ್ಪಟ್ಟ ಕಾರ್ಯ ಸೂಚಿಯ ಕಾಗದ ಪತ್ರಗಳು ಮತ್ತು ತತ್ಸಂಬಂಧಿ ದಾಖಲೆಗಳನ್ನು ಓದಿ ಅರ್ಥ ಮಾಡಿಕೊಂಡು ಚರ್ಚೆಗೆ ಸಿದ್ಧರಾಗಿ ಬರುತ್ತಾರೆಂದು ನಿರೀಕ್ಷಿಸಲಾಗಿದೆ. ಮಂಡಳಿಯ ಚರ್ಚೆಗಳಲ್ಲಿ ಸದಸ್ಯರು ಸಕ್ರಿಯವಾಗಿ ಮತ್ತು ರಚನಾತ್ಮಕವಾಗಿ ಭಾಗವಹಿಸತಕ್ಕದ್ದು ಹಾಗು ಮಂಡಳಿಯು ತಾನು ಹೇಗೆ ಆಡಳಿತ ನಡೆಸಬೇಕು ಮತ್ತು ವರ್ತಿಸಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಮಂಡಳಿಯು ತಾನೇ ಒಪ್ಪಿಕೊಂಡ ಮಾರ್ಗದರ್ಶಿ ಸೂಚನೆಗಳನ್ನು ಅನುಸರಿಸಬೇಕು. ಮಂಡಳಿಯು ಕೈಗೆತ್ತಿಕೊಂಡ ವಿಷಯಗಳಿಗೆ ಸಂಬಂಧಿಸಿದ ಚರ್ಚೆಯಲ್ಲಿ ಸದಸ್ಯರು ತಮ್ಮ ವಿಚಾರಗಳನ್ನು, ಅಭಿಪ್ರಾಯಗಳನ್ನು, ವೈರುಧ್ಯದ ಅಭಿಪ್ರಾಯಗಳನ್ನು ಅಭಿವ್ಯಕ್ತಗೊಳಿಸಬಹುದು. ಮಂಡಳಿಯು ಕಾಲಕಾಲಕ್ಕೆ

ಪರ್ಯಾಲೋಚನಾಂಶಗಳ ಸಮೇತ ವಿವಿಧ ಸಮಿತಿಗಳನ್ನು ರಚಿಸಬಹುದು. ಮಂಡಳಿಯಿಂದ ನಾಮನಿರ್ದೇಶಿತರಾದ ಸಮಿತಿಯ ಸದಸ್ಯರು ಅಂತಹ ಸಮಿತಿಯ ಎಲ್ಲ ಸಭೆಗಳಿಗೂ ಹಾಜರಾಗತಕ್ಕದ್ದು ಹಾಗು ಸಮಿತಿಯ ಪರ್ಯಾಲೋಚನಾಂಶಗಳ ವ್ಯಾಪ್ತಿಗೆ ಬರುವ ಎಲ್ಲ ಅಂಶಗಳನ್ನು/ ವಿಷಯಗಳನ್ನು ನಿಗದಿಪಡಿಸಿದ ಅವಧಿಯೊಳಗೆ ಮತ್ತು ಪ್ರಾರೂಪದಲ್ಲಿ ಸಮಿತಿಯು ಕೈಗೆತ್ತಿಕೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಮಂಡಳಿಯು ಪ್ರಸ್ತುತ ಈ ಕೆಳಕಂಡ ಸಮಿತಿಗಳನ್ನು ರಚಿಸಿರುತ್ತದೆ:

- o ಲೆಕ್ಕ ಪರಿಶೋಧನಾ ಸಮಿತಿ
- o ಸಂಭಾವನಾ ಸಮಿತಿ

ಬಿ. ಮಂಡಳಿಯ ಸಭೆಗಳಲ್ಲಿನ ನಡವಳಿಕೆಗಳಲ್ಲಿ ಸಕ್ರಿಯ ಭಾಗವಹಿಸುವಿಕೆ

ಕಂಪೆನಿ ಆಡಳಿತ ಮಂಡಳಿಯ ಸಭೆಗಳಲ್ಲಿನ ನಡವಳಿಕೆಗಳಲ್ಲಿ ಸದಸ್ಯರು ಸಕ್ರಿಯವಾಗಿ ಭಾಗವಹಿಸತಕ್ಕದ್ದು. ದೂರದರ್ಶಿತ್ವದ ನಾಯಕತ್ವವನ್ನು ಒದಗಿಸತಕ್ಕದ್ದು ಹಾಗು ಕಂಪೆನಿಯು ತನ್ನ ಪಾಲುದಾರರ ಮತ್ತು ಕಾಯಿದೆಯ ಮತ್ತು ವಿನಿಯಂತ್ರಕ ಹೊಣೆಗಾರಿಕೆಗಳನ್ನು ಪೂರೈಸುತ್ತಿದೆಯೆಂಬುದನ್ನು ಖಾತ್ರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಸಂಸ್ಥೆಯ ವಹಿವಾಟು ಮತ್ತು ಗುರಿಗೆ ಸಂಬಂಧಿಸಿದಂತೆ ಧನಾತ್ಮಕ ಕೊಡುಗೆ ನೀಡಬೇಕು. ನಿರ್ದೇಶಕರುಗಳಿಗೆ ಯಾವುದೇ ಕಾರ್ಯಾಚರಣೆಯ ಜವಾಬ್ದಾರಿ ವಹಿಸಿಕೊಟ್ಟಾಗ ಅವರು ಕಂಪೆನಿಯ ವಹಿವಾಟಿನಲ್ಲಿ ಭಾಗವಹಿಸುವಾಗ ಪ್ರಾಮಾಣಿಕವಾಗಿ ಸದುದ್ದೇಶದಿಂದ ಮತ್ತು ಸಂಸ್ಥೆಯ ತನ್ನ ಸಹಸದಸ್ಯರ ಗರಿಷ್ಠಹಿತಾಸಕ್ತಿಯಲ್ಲಿ ವರ್ತಿಸಬೇಕು. ಅಲ್ಲದೆ ತತ್ಸಮಾನ ಸಂದರ್ಭಗಳಲ್ಲಿ ಒಬ್ಬ ಸಾಕಷ್ಟು ವಿವೇಕವುಳ್ಳ ವ್ಯಕ್ತಿಯು ಯಾವ ರೀತಿ ಪೂರ್ಣ ಎಚ್ಚರ, ಪರಿಶ್ರಮ ಮತ್ತು ಕೌಶಲದಿಂದ ವರ್ತಿಸುವನೋ ಆ ಬಗೆಯಲ್ಲಿ ವರ್ತಿಸಬೇಕು. ಕಂಪೆನಿಯ ವ್ಯವಹಾರ ಮತ್ತು ವಹಿವಾಟಿನ ನಿರ್ವಹಣೆಯ ಮೇಲುಸ್ತುವಾರಿಯ ಜವಾಬ್ದಾರಿಯು ಅವರದ್ದಾಗಿರುತ್ತದೆ. ಜೊತೆಗೇ ಕಾರ್ಯಾಚರಣೆ ನಿರ್ವಹಣಾವರ್ಗದ ಸ್ವಾತಂತ್ರ್ಯಕ್ಕೂ ಅವರು ಅವಕಾಶಕಲ್ಪಿಸಿಕೊಡಬೇಕು.

**ಸಿ. ಕೆಲವು ವರದಿಗಳನ್ನು /ಅನುಪಾಲನಾವರದಿಗಳನ್ನು ಪುನರೀಕ್ಷಿಸುವ ಕರ್ತವ್ಯ**

ಕಾಲಕಾಲಕ್ಕೆ ನಿಗದಿಪಡಿಸಬಹುದಾದ ಕಾಲಾಂತರಗಳಲ್ಲಿ ಕಂಪೆನಿಯ ವ್ಯವಹಾರಗಳಿಗೆ ಸಂಬಂಧಿಸಿದಂತಹ ಕೆಲವು ವರದಿಗಳನ್ನು / ಅನುಪಾಲನಾ ವರದಿಗಳನ್ನು ನಿರ್ದೇಶಕರುಗಳ ಮಂಡಳಿಯು ಪುನರೀಕ್ಷಿಸುವುದು ಅಗತ್ಯವಾಗಿರುತ್ತದೆ. ಅಂತಹ ವರದಿಗಳು/ಅನುಪಾಲನಾವರದಿಗಳ ಪಟ್ಟಿಯನ್ನು ಈ ಮುಂದೆ ಕೊಡಲಾಗಿದೆ. ಕಾಯಿದೆಯ ಅನುಸರಣೆಗಾಗಿ ಮತ್ತು ಕಂಪೆನಿಯ ಕಾರ್ಯಾಚರಣೆಗಳು ಸುಲಲಿತವಾಗಿಯೂ ಹಾಗು ಪಾರದರ್ಶಕವಾಗಿಯೂ ನಡೆಯುವುದನ್ನು ಖಾತ್ರಿಪಡಿಸಿಕೊಳ್ಳಲು ಮಂಡಳಿಯು ಅಂತಹ ವರದಿಗಳಲ್ಲಿ ಯಥೋಚಿತವೆನಿಸುವಂತೆ ಹೆಚ್ಚಿನದನ್ನು ಸಡೇರಿಸಬಹುದು ಅಥವಾ ಅವನ್ನು ಪರಿಷ್ಕರಿಸಬಹುದು.

ಎ) ೧೯೫೬ರ ಕಂಪೆನಿಗಳ ಅಧಿನಿಯಮದಮೇರೆಗೆ, ಯಾವುದಾದರೂ ಇದ್ದಲ್ಲಿ, ಅಂತಹ ಕಾಯಿದೆಬದ್ಧ ಅನುಪಾಲನಾವರದಿ.

ಬಿ) ಆವಶ್ಯಕ ವರದಿಗಳೊಂದಿಗೆ ತ್ರೈಮಾಸಿಕ ಮತ್ತು ವಾರ್ಷಿಕ ವಿತ್ತೀಯತಃಖ್ತೆಗಳು

ಎಫ್) ವಾರ್ಷಿಕ ಕಾರ್ಯಾಚರಣೆ ಯೋಜನೆಗಳು ಮತ್ತು ಆಯವ್ಯಯಗಳು

ಜಿ) ಕಾರ್ಯನಿರ್ವಾಹಕ ಮತ್ತು ಕಾರ್ಯನಿರ್ವಾಹಕೇತರ ನಿರ್ದೇಶಕರುಗಳಿಗೆ ಮತ್ತು ನೌಕರರಿಗೆ ನೀಡಬೇಕಾದ ಸಂಭಾವನೆಯ ಬಗೆಗಿನ ನೀತಿಗಳು

ಇ) ಒಳ ವ್ಯಾಪಾರ ಪ್ರತಿಬಂಧಿಸುವ ಸಂಹಿತೆ, ಮಂಡಳಿ ಮತ್ತು ನೌಕರರ ಆಚಾರ ಸಂಹಿತೆ, ಪ್ರಾಧಿಕರಿಸುವ ಬಗೆಗಿನ ನೀತಿ ಇತ್ಯಾದಿಗಳೂ ಒಳಗೊಂಡಂತೆ ಆಂತರಿಕ ಸಂಹಿತೆಗಳ ಅನುಷ್ಠಾನ ಮತ್ತು ಪುನರೀಕ್ಷಣೆ.

**ಡಿ. ನಿರಂತರ ಮಾಹಿತಿ ಪ್ರಕಟಣೆ**

ಕಂಪೆನಿ ಕಾನೂನು, ಪಟ್ಟಿಮಾಡಲ್ಪಡುವ ಒಪ್ಪಂದಗಳು ಮತ್ತು ಅನ್ವಯವಾಗುವ ಇತರ ಕಾನೂನುಗಳ ಮೇರೆಗೆ ನಿರ್ದೇಶಕರುಗಳು,ನಿಯತ ಕಾಲಾಂತರಗಳಲ್ಲಿ ಅಥವಾ ಈ ಹಿಂದೆ ನಿರ್ದೇಶಕರುಗಳು ಪ್ರಕಟಪಡಿಸಿದ ಮಾಹಿತಿಗೆ ಸಂಬಂಧಿಸಿದಂತೆ ಯಾವುದಾದರೂ ಬೆಳವಣಿಗೆಗಳು ಸಂಭವಿಸಿದಾಗ ಕಂಪೆನಿಗೆ ಕೆಲವು ಮಾಹಿತಿಯನ್ನು ಪ್ರಕಟಪಡಿಸುವುದು ಅಗತ್ಯವಾಗಿರುತ್ತದೆ. ಅಂತಹ ಪ್ರಕಟಪಡಿಸಬೇಕಾದ ಅಗತ್ಯತೆ ಉಳ್ಳವುಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ನೀಡಲಾಗಿದೆ.

i) ಇತರ ಕಂಪೆನಿಗಳಲ್ಲಿ / ಸಂಸ್ಥೆಗಳಲ್ಲಿ ಇರುವ ಹಿತಾಸಕ್ತಿ ಕುರಿತಂತೆ ಪ್ರಕಟಣೆ

ಮಂಡಳಿಯ ಸದಸ್ಯನು ತಾನು ನೇಮಕವಾದಾಗ, ನಿಗದಿಪಡಿಸಬಹುದಾದ ಕಾಲಾಂತರಗಳಲ್ಲಿ ಕಂಪೆನಿ ಕಾರ್ಯದರ್ಶಿಗೆ, ಅವನು ಕೋರಿಕೆ ಸಲ್ಲಿಸಿದಾಗ ಮತ್ತು ಮಧ್ಯಂತರದಲ್ಲಿ ಮಹತ್ವದ ಬದಲಾವಣೆಗಳು ಸಂಭವಿಸಿರುವಲ್ಲಿತನ್ನ ನೇಮಕಾತಿ, ಇತರ ವಹಿವಾಟಿನ ಹಿತಾಸಕ್ತಿಗಳು ಮತ್ತು ತಾನು ನೇರವಾಗಿ ಅಥವಾ ತನ್ನ ಬಂಧುಗಳ ಮುಖಾಂತರ ತಾನು ಹಿತಾಸಕ್ತಿ ಹೊಂದಿರುವ ಎಲ ಕಂಪೆನಿಗಳು /ಸಂಸ್ಥೆಗಳು ಇವುಗಳ ಪಟ್ಟಿಯನ್ನು ವಿವರ ಸಮೇತ ಒದಗಿಸಬೇಕು.

ii) ಕೆಲವು ವ್ಯವಹಾರಗಳ ಪ್ರಕಟಣೆ

ಒಬ್ಬ ಸದಸ್ಯನಿಗೆ ಘೋಷಿತ ಹಿತಾಸಕ್ತಿಯಿರುವ ಯಾವುದೇ ಒಂದು ಕಂಪೆನಿ ಅಥವಾ ನಿಕಾಯದೊಂದಿಗೆ ಕಂಪೆನಿಯು ಗುತ್ತಿಗೆ ರೂಪದ ಏರ್ಪಾಡನ್ನು ಮಂಡಳಿಗೆ ಕೂಡಲೇ ಪ್ರಕಟಪಡಿಸಬೇಕೆಂದು ಹಾಗು ಇದನ್ನು ವಾರ್ಷಿಕ ವಿತ್ತೀಯ ತಃಖ್ತೆಗಳಲ್ಲಿಯೂ ಪ್ರಕಟಪಡಿಸಬೇಕೆಂದೂ ಮಂಡಳಿಯ ಸದಸ್ಯರು ಒಪ್ಪಿಕೊಂಡಿರುತ್ತಾರೆ.

iii) ಸದಸ್ಯರು ಹಿತಾಸಕ್ತಿ ಹೊಂದಿರುವ ಕಂಪೆನಿಗಳು /ಸಂಸ್ಥೆಗಳು ಇತ್ಯಾದಿಯವು ದೊಡ್ಡಪ್ರಮಾಣದ ಸಿಸ್ತಿದಾರರಾಗಿರುವ ಮಾಹಿತಿ ಪ್ರಕಟಪಡಿಸುವುದು

ಆಡಳಿತ ಮಂಡಳಿಯ ಸದಸ್ಯನು, ತಾನು ನಿರ್ದೇಶಕನಾಗಿರುವ ಯಾವುದೇ ಕಂಪೆನಿಯು ಹಣಕಾಸು ಸಂಸ್ಥೆಗಳಿಗೆ ಸಾಲ ಮರುಪಾವತಿಯಲ್ಲಿ ಸುಸ್ತಿದಾರರಾಗಿರುವುದು, ಅದರ ಮೇಲಣ ಬಡ್ಡಿಯ ಸಂದಾಯದಲ್ಲಿ ಸಾವಧಿ ಠೇವಣಿಗಳ ಮರುಪಾವತಿಯಲ್ಲಿ, ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸುವುದರಲ್ಲಿ ದೊಡ್ಡ ಪ್ರಮಾಣದಲ್ಲಿ ಸುಸ್ತಿದಾರರಾಗದಂತೆ ಹಾಗೂ ಸೆಬಿ ಕಾನೂನು ಮತ್ತು ಅನ್ವಯವಾಗುವ ಇತರ ಸಾಂಸ್ಥಿಕ ಕಾನೂನುಗಳ ಗಂಭೀರ ಉಲ್ಲಂಘನೆ ಆಗದಂತೆ ಖಾತ್ರಿಪಡಿಸಿಕೊಳ್ಳಬೇಕು. ಆದಾಗ್ಯೂ ಅಂತಹ ಸನ್ನಿವೇಶಗಳು ಉದ್ಭವಿಸಿದಾಗ ನಿರ್ದೇಶಕರುಗಳು ಯಥೋಚಿತ ಮುಂದಿನ ಕ್ರಮಕ್ಕಾಗಿ ಕಂಪೆನಿ ಕಾರ್ಯದರ್ಶಿಯನ್ನು ಸಂಪರ್ಕಿಸಬೇಕು ಮತ್ತು ವಿಷಯವನ್ನು ಮಂಡಳಿಗೆ ತಿಳಿಸಬೇಕು. ಈ ಬಗ್ಗೆ ಅನ್ವಯವಾಗುವ ನಿಗದಿತ ಪ್ರಪತ್ರದಲ್ಲಿ ಒಂದು ಘೋಷಣೆಯನ್ನು ಪ್ರತಿ ವರ್ಷ ಕಂಪೆನಿಗೆ ಸಲ್ಲಿಸಬೇಕು.

iv) ಷೇರುವಿವರ ಮತ್ತು ನಿರ್ದೇಶಕ ಪದಸ್ಥಾನದ ಪ್ರಕಟಣೆ

ಮಂಡಳಿಯ ಸದಸ್ಯರು ಈ ಮುಂದಿನದನ್ನು ಬಹಿರಂಗಗೊಳಿಸಬೇಕು :

- ನೇಮಕಾತಿ ಆಗುವ ಕಾಲಕ್ಕೆ ಇದ್ದಿರಬಹುದಾದ ಕಂಪೆನಿಯಲ್ಲಿನ ಮತ್ತು/ಅಥವಾ ಅಂಗ ಸಂಸ್ಥೆಗಳಲ್ಲಿನ ಪ್ರಯೋಜನಾತ್ಮಕ ಷೇರುಗಳ ವಿವರ. ಆ ತರುವಾಯ ಅನ್ವಯವಾಗುವಷ್ಟರಮಟ್ಟಿಗೆ / ಒಳ ವ್ಯಾಪಾರವಿನಿಯಮಗಳ ವ್ಯಾಪ್ತಿಗೆ ಒಳಪಟ್ಟಿರುವಂತೆ ಆಗಿರುವ ಬದಲಾವಣೆಗಳು.

- ನೇಮಕಾತಿಯಾದಾಗಿನ ಸಮಯದಲ್ಲಿ ಹಾಗು ಆ ತರುವಾಯ ವರ್ಷವರ್ಷಕ್ಕೆ ಇತರ ಕಂಪೆನಿಗಳಲ್ಲಿ ನಿರ್ದೇಶಕ ಸ್ಥಾನ ಸಮಿತಿ ಸದಸ್ಯ ಸ್ಥಾನದ ವಿವರಗಳು. ವರ್ಷದಲ್ಲಾದ ಯಾವುದೇ ಬದಲಾವಣೆಯನ್ನು ಕಂಪೆನಿಗೆ ತಿಳಿಸತಕ್ಕದ್ದು ಹಾಗು ಮಂಡಳಿಯು ತನ್ನ ನಿಕಟ ಮುಂದಿನ ಸಭೆಯಲ್ಲಿ ಇದನ್ನು ದಾಖಲಿಸಿಕೊಳ್ಳುವುದು

೩. ಷೇರುಧಾರಕರ ವಿಷಯದಲ್ಲಿ ನಿರ್ದೇಶಕರು ಮತ್ತು ನೌಕರರು ಪಾಲಿಸಬೇಕಾದ ನಿಯಮಗಳು

ಎ. ತಮ್ಮ ಕರ್ತವ್ಯಗಳನ್ನು ಅತ್ಯಂತ ಪ್ರಾಮಾಣಿಕತೆಯಿಂದ ನಿರ್ವಹಿಸುವುದು ಮತ್ತು ಕಂಪೆನಿಯ ಎಲ್ಲ ಷೇರುಧಾರಕರ ಗರಿಷ್ಠ ಲಾಭವನ್ನು ಗಮನದಲ್ಲಿಟ್ಟುಕೊಂಡು ಸುದುದ್ದೇಶದಿಂದ ಮತ್ತು ನ್ಯಾಯ ಸಮ್ಮತವಾದ ತೀರ್ಮಾನಗಳನ್ನು ತೆಗೆದುಕೊಳ್ಳುವುದು.

ಬಿ. ತಮ್ಮ ತೀರ್ಮಾನ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದಂತೆ ಕಂಪೆನಿ ಮತ್ತು ಅದರ ಷೇರುಧಾರಕರ ಗರಿಷ್ಠ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸಾಕಷ್ಟು ಎಚ್ಚರಿಕೆ, ಸಕ್ಷಮತೆ ಮತ್ತು ಶ್ರದ್ಧೆ ವಹಿಸಿ ಕೆಲಸ ಮಾಡುವುದು.

ಸಿ. ಕಂಪೆನಿಯ ಯಾವುದೇ ಮೂರ್ತ ಮತ್ತು ಅಮೂರ್ತಸ್ವತ್ತು ಗಳನ್ನು ಅವು ಅಪಮೌಲ್ಯವಾಗದಂತೆ ಅಥವಾ ಕಳೆದುಹೋಗದಂತೆ ಬಳಸುವುದು. ಅಂತಹ ಸ್ವತ್ತುಗಳನ್ನು ಮಂಡಳಿ ಅಥವಾ ಸದ್ಯದಲ್ಲಿರುವ ಸಾಂಸ್ಥಿಕ ಸಂರಚನೆಯ ಪ್ರಕಾರ ಇರುವ ಇತರ ಯಾವುದೇ ಸಕ್ಷಮ ಪ್ರಾಧಿಕಾರವು ಅನುಮೋದಿಸಿದ ಹೊರತು ತಮ್ಮ ಸ್ವಂತ ಬಳಕೆಗೆ ಉಪಯೋಗಿಸತಕ್ಕದ್ದಲ್ಲ.

ಡಿ. ಕಂಪೆನಿ ಮತ್ತು ಅದರ ಷೇರುಧಾರಕರ ವಿಷಯದಲ್ಲಿನ ತಮ್ಮ ಕರ್ತವ್ಯಗಳನ್ನು ಎಲ್ಲ ಕಾಲದಲ್ಲಿ ತಮ್ಮ ಗರಿಷ್ಠ ಸಾಮರ್ಥ್ಯಕ್ಕೆ ಒಳಪಟ್ಟಂತೆ ತಮ್ಮ ಜ್ಞಾನ ಮತ್ತು ಕೌಶಲವನ್ನು ಒರೆಗೆ ಹಚ್ಚಿ ನಿರ್ವಹಿಸುವುದು.

ಇ. ಷೇರುಧಾರಕನ ಮೌಲ್ಯವನ್ನು ಅಧಿಕಗೊಳಿಸಲು ಮತ್ತು ಷೇರುಧಾರಕರ ಹಕ್ಕುಗಳಿಗೆ ಅನ್ವಯಿಸುವ ಎಲ್ಲ ವಿನಿಯಮನಗಳನ್ನು ಮತ್ತು ಕಾನೂನುಗಳನ್ನೂ ಪಾಲಿಸಲು ಐಸಿಸಿಎಲ್ ಬದ್ಧವಾಗಿರುತ್ತದೆ. ಐಸಿಸಿಎಲ್ ನ ನಿರ್ದೇಶಕರ ಮಂಡಳಿಯು, ಕಂಪೆನಿಯ ವಹಿವಾಟಿಗೆ ಸಂಗತವಾದ ಎಲ್ಲ ವಿಷಯಗಳನ್ನೂ ತನ್ನ ಷೇರುಧಾರಕರಿಗೆ ಯುಕ್ತವಾಗಿ ಮತ್ತು ಸಮ್ಮತವೆನಿಸುವಂತೆ ತಿಳಿಸತಕ್ಕದ್ದು ಹಾಗು ಅಂತಹ ಮಾಹಿತಿಯನ್ನು ತತ್ಸಂಬಂಧವಾದ ವಿನಿಯಮನಗಳು ಮತ್ತು ಒಪ್ಪಂದಗಳಿಗೆ ಅನುಸಾರವಾಗಿ ಬಹಿರಂಗಗೊಳಿಸಬೇಕು.

ಎಫ್. ತಮಗೆ ಲಭ್ಯವಾಗುವ ಮತ್ತು ತಮ್ಮ ವಶದಲ್ಲಿರುವ ಕಂಪೆನಿಯ ಗೌಪ್ಯಮಾಹಿತಿಯು ತನ್ನಿಮಿತ್ತ ಒಳಮಾಹಿತಿಯೆಂದು ಪರಿಗಣಿತವಾಗಿರುವ ಮಾಹಿತಿಯಿಂದ ಪ್ರಯೋಜನ ಪಡೆಯಲು ಅಥವಾ ಇತರರು ಪ್ರಯೋಜನ ಪಡೆಯುವಂತೆ ನೆರವು ನೀಡಲು ಕಂಪೆನಿಯ ಯಾವುದೇ ನಿರ್ದೇಶಕನು ಅಥವಾ ನೌಕರನು ಯತ್ನಿಸತಕ್ಕದ್ದಲ್ಲ. ಸೆಬಿಯು ಒಳ ವ್ಯಾಪಾರಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಮಾರ್ಗದರ್ಶಿ ಸೂಚನೆಗಳು ಯಾವ ರೀತಿ ಮತ್ತು ಯಾವಾಗ ಅನ್ವಯವಾಗುವುದೋ ಆಗ ಎಲ್ಲ ನಿರ್ದೇಶಕರು ಮತ್ತು ನೌಕರರೂ ಅವುಗಳನ್ನು ಪಾಲಿಸತಕ್ಕದ್ದು.

ವಿಶೇಷತಃ ಪ್ರಾಧಿಕರಿಸಿದ ಹೊರತು ಕಂಪೆನಿಯ ನಿರ್ದೇಶಕನು ಅಥವಾ / ನೌಕರನು ಔಪಚಾರಿಕವಾಗಿಯಾಗಲಿ ಅಥವಾ ಅನೌಪಚಾರಿಕವಾಗಿಯಾಗಲಿ ವೃತ್ತ ಪತ್ರಿಕೆಗಳಿಗೆ ಅಥವಾ ಇತರೆ ಪ್ರಸಾರ ಮಾಧ್ಯಮಕ್ಕೆ ಯಾವುದೇ ಒಳಮಾಹಿತಿಯನ್ನು ಒದಗಿಸತಕ್ಕದ್ದಲ್ಲ.

ಒಳಮಾಹಿತಿಯೆಂಬುದು ಈ ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು :

- ವಹಿವಾಟು ಅಥವಾ ವಹಿವಾಟಿನ ಘಟಕಗಳ ಮಾರಾಟ.
- ಹೊಸ ಉತ್ಪನ್ನಗಳ ಪರಿಚಯ ಅಥವಾ ಅಭಿವೃದ್ಧಿಯ ಬಗೆಗಿನ ಮಾಹಿತಿ ಪ್ರಕಟಣೆ.
- ಲಾಭಗಳು, ಗಳಿಕೆಗಳು ಮತ್ತು ಲಾಭಾಂಶಗಳೇ ಮುಂತಾದ ವಿತ್ತೀಯ ಮಾಹಿತಿಗಳು.
- ಸ್ವತ್ತುಗಳ ಮರು ಮೌಲ್ಯೀಕರಣ.
- ಹೂಡಿಕೆಗೆ ಸಂಬಂಧಿಸಿದ ತೀರ್ಮಾನಗಳು / ಯೋಜನೆಗಳು.
- ಪುನಾರಚನೆಯ ಯೋಜನೆಗಳು.
- ಪ್ರಮುಖ ಕಾರ್ಯಭಾರದ ಒಪ್ಪಂದಗಳು.
- ಹಣಕಾಸು ಎತ್ತುವಳಿ.
- ಮಾನ್ಯತೆ ಪಡೆದ ಯಾವುದೇ ಷೇರುವಿನಿಮಯ ಕೇಂದ್ರದಲ್ಲಿ ಪಟ್ಟಿಯಾಗಿದ್ದು ಕಂಪೆನಿಯ ಷೇರಿನ ಮಾರುಕಟ್ಟೆ ಬೆಲೆಗೆ ಸಂಬಂಧಿಸಿದಂತೆ ಇರುವ ಯಾವುದೇ ಇತರ ಬೆಲೆ ಸಂಬಂಧಿ ಸೂಕ್ಷ್ಮಮಾಹಿತಿ.
- ಕಂಪೆನಿಯು ಪ್ರಕಟಣೆ ಮಾಡಬಾರದೆಂದು ಸಹಿ ಹಾಕಿದ ಒಪ್ಪಂದದ / ಗಳ ಯಾವುದೇ ಮಾಹಿತಿ.

**೪. ನೌಕರರ ವಿಷಯದಲ್ಲಿ ನಿರ್ದೇಶಕರು ಮತ್ತು ನೌಕರರು ಪಾಲಿಸಬೇಕಾದ ನಿಯಮಗಳು**

ಎ. ತನ್ನ ನೌಕರರಿಗೆ ನ್ಯಾಯ ಸಮ್ಮತ ವೇತನವನ್ನು ನೀಡುವುದು.

ಬಿ. ನೌಕರರ ಕಾರ್ಯ ಪರಿಸರವನ್ನು ಯೋಗ್ಯ ರೀತಿಯಲ್ಲಿ ಆರೋಗ್ಯಕರವಾಗಿ ಮತ್ತು ಸುರಕ್ಷಿತವಾಗಿ ಇಡುವುದು.

ಸಿ. ನೌಕರರಿಗೆ ಸಂಬಂಧಿಸಿದ ಕಾನೂನುಗಳನ್ನು ಮತ್ತು ವಿನಿಯಮನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

ಡಿ. ನೌಕರರೊಡನೆ ಸೌಜನ್ಯದಿಂದ ವರ್ತಿಸುವುದು ಹಾಗು ಅವರ ವ್ಯಕ್ತಿತ್ವ ಮತ್ತು ಮಾನವೀಯತೆಗೆ ಯುಕ್ತ ಗೌರವ ನೀಡುವುದು.

ಇ. ಸಂಸ್ಥೆಯೊಳಗೆ ನಡೆಯುವ ಅಕ್ರಮ ಕೃತ್ಯಗಳನ್ನು ವರದಿಸಲು ನೌಕರರಿಗೆ ಅವಕಾಶ ನೀಡುವುದು

ಎಫ್.  ನೌಕರನ ಗುಣಾರ್ಹತೆ, ಕೌಶಲ್ಯ, ಜ್ಞಾನ ಮತ್ತು ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಅವನಿಗೆ ಉತ್ತೇಜನಗಳೇ ಇತ್ಯಾದಿಯನ್ನು ನೀಡಿ ತನ್ಮೂಲಕ ನೌಕರರನ್ನು ಪ್ರವರ್ತಿಸಿ ಪ್ರೋತ್ಸಾಸುವುದು.

ಜಿ.  ಸಮಾನ ಅವಕಾಶಗಳನ್ನೂ ಕೊಡುವುದರ ಮೂಲಕ ಮತ್ತು ವೃತ್ತಿ ವಿಷಯದಲ್ಲಿ ಪರಿಣಿತರಾಗಿರುವ ನೌಕರರ ಅಭಿಪ್ರಾಯಗಳು ಮತ್ತು ಸಲಹೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಮೂಲಕನೌಕರರ ಜ್ಞಾನ ಮತ್ತು ಸಾಮರ್ಥ್ಯದ ಅಭಿವೃದ್ಧಿಗೆ ಆದ್ಯತೆ ನೀಡುವುದು.

ಹೆಚ್.  ಜನಾಂಗ, ಜಾತಿ, ಧರ್ಮ, ವರ್ಣ, ಪೀಳಿಗೆ, ವೈವಾಹಿಕ ಸ್ಥಿತಿ, ಲಿಂಗ, ವಯಸ್ಸು, ರಾಷ್ಟ್ರೀಯತೆ ಮತ್ತು ಅಂಗವಿಕಲತೆ ಇವುಗಳನ್ನು ಪರಿಗಣನೆಗೆ ತಾರದೆ ಎಲ್ಲ ನೌಕರರಿಗೂ ಮತ್ತು ಅರ್ಹ ಉದ್ಯೋಗಾರ್ತಿಗಳಿಗೂ ಸಮಾನ ಅವಕಾಶ ಕಲ್ಪಿಸಿ ಕೊಡುವುದು.

ಐ. ಶಾರೀರಿಕ, ಮಾತಿನ ಮೂಲಕ ಅಥವಾ ಮಾನಸಿಕವಾಗಿ ಲೈಂಗಿಕ ಕಿರುಕುಳ ಮುಕ್ತ ಕಾರ್ಯ ಪರಿಸರವನ್ನು ನಿರ್ವಹಿಸುವ ನೀತಿಗನುಗುಣವಾಗಿ ಎಲ್ಲ ನೌಕರರನ್ನೂ ಗೌರವದಿಂದ ನಡೆಸಿಕೊಳ್ಳುವುದು.

ಜೆ.  ನೌಕರರಲ್ಲಿ ಸಾಮೂಹಿಕವಾಗಿ ಐಕ್ಯತೆ ಮತ್ತು ಸಾಮರಸ್ಯತೆಯನ್ನು ಹುಟ್ಟುಹಾಕಿ ಅದನ್ನು ಪಾಲಿಸಿಕೊಂಡು ಬರುವುದು.

ಕೆ.  ಐಸಿಸಿಎಲ್‌ನ ನೌಕರನು/ಳು ಕಂಪೆನಿ ಅಥವಾ ಸಮೂಹದ ವಹಿವಾಟು ಅಥವಾ ಹಿತಾಸಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರದಿರುವ ಮಟ್ಟಿಗೆ ತನ್ನ ಖಾಸಗಿ ಜೀವನದಲ್ಲಿ ನಾಗರೀಕ ಅಥವಾ ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಅಥವಾ ಇತರ ಯಾವುದೇ ಸಾಮಾಜಿಕ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬಹುದು.

**೫.  ಗಿರಾಕಿಗಳ ವಿಷಯದಲ್ಲಿ ನಿರ್ದೇಶಕರು ಮತ್ತು ನೌಕರರು ಪಾಲಿಸಬೇಕಾದ ನಿಯಮಗಳು:**

ಎ. ತನ್ನ ಗಿರಾಕಿಗಳಿಗೆ ಉತ್ತಮ ಸೇವೆ ಒದಗಿಸುವುದು.

ಬಿ. ಗ್ರಾಹಕರೊಡನೆ ಒಪ್ಪಂದಕ್ಕೆ ಬಂದು ನಿಗದಿತವಾದ ಷರತ್ತುಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವುದು.

ಸಿ. ಗಿರಾಕಿಗಳಿಗೆ ಮತ್ತು ಸಂಸ್ಥೆಗೆ ಹೆಚ್ಚಿನ ಲಾಭ ತರುವ ಮಾರ್ಗಗಳನ್ನು ನಿರಂತರವಾಗಿ ಹುಡುಕುವುದು.

ಡಿ. ಗಿರಾಕಿಯ ಗೌಪ್ಯತೆಯನ್ನು ಕಟ್ಟುನಿಟ್ಟಾಗಿ ಕಾಪಾಡುವುದು ಹಾಗು ಗಿರಾಕಿಯು ವ್ಯಕ್ತಿ ಅಥವಾ ಸಂಸ್ಥೆ ಆಗಿರಲಿ ಅಥವಾ ಎರಡೂ ಆಗಿರಲಿ ಅವನ ಅಥವಾ ಅದರ ರಹಸ್ಯಗಳನ್ನು ತನ್ನ ಹಿತಾಸಕ್ತಿಗಳಿಗೆ ಅಥವಾ ತನಗೆ ಸಂಬಂಧಪಟ್ಟ ಪಕ್ಷಕಾರರ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ನ್ಯಾಯವಲ್ಲದ ರೀತಿಯಲ್ಲಿ ಬಳಸಿಕೊಳ್ಳಬಾರದು.

೩. ಗಿರಾಕಿಯೊಡನೆ ಮಾಡಿಕೊಂಡ ಒಪ್ಪಂದದಲ್ಲಿನ ಯಾವುದೇ ನಿಬಂಧನೆಯನ್ನು ಈಡೇರಿಸದ ಸಂದರ್ಭದಲ್ಲಿ ಪರಸ್ಪರ ಸಮಾಧಾನಕರ ಪರಿಹಾರ ರೂಪಿಸಿಕೊಳ್ಳಲು ಈ ಬಗ್ಗೆ ಗಿರಾಕಿಗೆ ಮೊದಲೇ ಈ ವಿಷಯ ತಿಳಿಸುವುದು.

**೬. ಕಾಯಿದೆಬದ್ಧ ಪ್ರಾಧಿಕಾರಗಳ ವಿಷಯದಲ್ಲಿ ನಿರ್ದೇಶಕರು ಮತ್ತು ನೌಕರರು ಪಾಲಿಸಬೇಕಾದ ನಿಯಮಗಳು:**

ಸಾರ್ವಜನಿಕ ಮಾಹಿತಿ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ಕಾಯಿದೆಬದ್ಧ ಪ್ರಾಧಿಕಾರವು ಪ್ರಶ್ನೆಗಳನ್ನು ಕೇಳಿದಾಗ ನಿರ್ದೇಶಕರು ಮತ್ತು ನೌಕರರು ಅವುಗಳಿಗೆ ಕೂಡಲೇ ಕರಾರುವಾಕ್ಕಾದ ಉತ್ತರಗಳನ್ನು ಒದಗಿಸುವರೆಂದು ಕಂಪೆನಿಯು ನಿರೀಕ್ಷಿಸುತ್ತದೆ. ಎಲ್ಲ ಕಾಯಿದೆಬದ್ಧ ಪ್ರಾಧಿಕಾರಗಳಿಗೆ ಸಲ್ಲಿಸಲ್ಪಡುವ ಕಂಪೆನಿಯ ವರದಿಗಳು ಪೂರ್ಣವಾಗಿ ಸಮ್ಮತವೆನಿಸುವಂತೆ ಕರಾರುವಾಕ್ಕಾಗಿ ಮತ್ತು ಸಕಾಲಿಕವಾಗಿ ಇರಬೇಕೆನ್ನುವ ಸಲುವಾಗಿ ಅಗತ್ಯತೆಗಳಿಗೆ ಸಂಬಂಧಿಸಿದಂತೆ ಎಲ್ಲ ಆವಶ್ಯಕ ಮಾಹಿತಿಯನ್ನೂ ನಿರ್ದೇಶಕರು ಮತ್ತು ನೌಕರರು ಒದಗಿಸುವರೆಂದು ನಿರೀಕ್ಷಿಸಲಾಗಿದೆ.

**೭. ೧೯೫೬ರ ಕಂಪೆನಿಗಳ ಅಧಿನಿಯಮದ ಪಾರಮ್ಯ ;**

೧೯೫೬ರ ಕಂಪೆನಿಗಳ ಅಧೀನಿಯಮ ಮತ್ತು ಅದರ ಮೇರೆಗೆ ಮಾಡಲ್ಪಟ್ಟ ಯಾವುದೇ ನಿಯಮಗಳು ಮತ್ತು ವಿನಿಯಮನಗಳ ಯಾವುದೇ ಉಪಬಂಧಗಳು ಮತ್ತು ಈ ಸಂಹಿತೆಯ ಉಪಬಂಧಗಳ ನಡುವೆ ಯಾವುದೇ ವೈರುಧ್ಯ ಏರ್ಪಟ್ಟಾಗ ೧೯೫೬ರ ಕಂಪೆನಿಗಳ ಆಧಿನಿಯಮ ಮತ್ತು ಅದರ ಮೇರೆಗೆ ಮಾಡಲ್ಪಟ್ಟ ಯಾವುದೇ ನಿಯಮಗಳು ಮತ್ತು ವಿನಿಯಮನಗಳ ಉಪಬಂಧಗಳು ಪಾರಮ್ಯ ಹೊಂದಿರುತ್ತದೆ.

**೮. ಈ ಸಂಹಿತೆಗೆ ತಿದ್ದುಪಡಿ ;**

ಈ ಸಂಹಿತೆಗೆ ತಿದ್ದುಪಡಿ, ಪರಿಷ್ಕರಣೆ ಮಾಡಲು ಅಥವಾ ವಿನಾಯ್ತಿ ನೀಡಲು ಕಂಪೆನಿಯ ನಿರ್ದೇಶಕರುಗಳ ಮಂಡಳಿ ಮಾತ್ರವೇ ಅಧಿಕಾರ ಹೊಂದಿರುತ್ತದೆ; ಮತ್ತು ಹಾಗೆ ಮಾಡಿರುವುದನ್ನು ಅನ್ವಯವಾಗುವ ಕಾನೂನು ಅಥವಾ ವಿನಿಯಮನವು ಅಗತ್ಯ ಪಡಿಸಿದಲ್ಲಿ ಸಾರ್ವಜನಿಕ ಪ್ರಕಟಣೆ ಮಾಡಬೇಕು. ಸಾಮಾನ್ಯ ನೀತಿಯಂತೆ ಮಂಡಳಿಯು ಈ ಸಂಹಿತೆಯಿಂದ ವಿನಾಯ್ತಿ ನೀಡುವುದಿಲ್ಲ.

……………………………………...........